ಅ) ಮಂಗಳೂರು ಸಮೀಪದ ಪಾಣಿ ಮಂಗಳೂರು ಸೇತುವೆ 100 ವರ್ಷಕ್ಕೂ ಹಳೆಯದು, ಈಗ ಅದು ನಾದುರಸ್ತಿಯಲ್ಲಿರುವುದು ಸರ್ಕಾರಕ್ಕೆ ಗೊತ್ತಿದೆಯಲ್ಲವೇ?

ಆ) ಈ ಸೇತುವೆಯ ಪುನರ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ 5 ಕೋಟಿ ರೂ. ಧನ ಸಹಾಯ ಬಿಡುಗಡೆ ಮಾಡಿದೆಯೇ, ಆರಂಭದಲ್ಲಿ ಅದರ ಕೆಲಸಕ್ಕೆ 20 ಲಕ್ಷ ರೂ. ಮಂಜೂರು ಮಾಡಿದೆಯೇ?

ಇ) ಅಪಾಯಕಾರಿ ಸ್ಥಿತಿಯಲ್ಲಿರುವ ಈ ಸೇತುವೆಯ ಕೆಲಸ ಎಂದಿನಿಂದ ಪ್ರಾರಂಭ?

ಶ್ರೀ ಜಿ.ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ಹೌದು

ಆ) ಈ ಸೇತುವೆಯು ರಾಷ್ಟ್ರೀಯ ಹೆದ್ದಾರಿ 48ರ ಮೇಲೆ ಬರುವುದರಿಂದ ಹೊಸ ಸೇತುವೆ ನಿರ್ಮಾಣದ ವೆಚ್ಚವನ್ನು ಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತದೆ. ಆದ್ದರಿಂದ ಧನ ಸಹಾಯ ಬಿಡುಗಡೆ ಮಾಡುವುದು ಮತ್ತು ಆರಂಭದಲ್ಲಿ ಈ ಕೆಲಸಕ್ಕೆ ಹಣ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಸೇತುವೆಯ ನಕ್ಷೆ ಮತ್ತು ರೂ. 897 ಲಕ್ಷಗಳ ಮೊತ್ತದ ಅಂದಾಜು ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಮಂಜೂರಾತಿಗೆ ದೊರೆತ ನಂತರ ಗುತ್ತಿಗೆದಾರರನ್ನು ನಿರ್ಧರಿಸಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಬೆಳಗಾವಿ ನಗರದಲ್ಲಿರುವ ಕನ್ನಡ ದಿನ ಪತ್ರಿಕೆಗಳು ಮುಚ್ಚುವ ಸ್ಥಿತಿಯಲ್ಲಿರುವ ಬಗ್ಗೆ

2556 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ನಗರದಲ್ಲಿರುವ ಕನ್ನಡ ದಿನಪತ್ರಿಕೆ ನಾಡೋಜ ಹಾಗೂ ಇನ್ನೂ ಬೇರೆ ಪತ್ರಿಕೆಗಳು ಆರ್ಥಿಕ ಮುಗ್ಗಟ್ಟಿನಿಂದ ಮುಚ್ಚುವ ಸ್ಥಿತಿಯಲ್ಲಿರುವ ಸಂಗತಿ ನಿಜವೇ?

ಆ) ಈ ಪತ್ರಿಕೆಗಳು ಮುಚ್ಚದಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಇ) ಸಂಯುಕ್ತ ಕರ್ನಾಟಕ ದಿನಪತ್ರಿಕೆಯು ಸಹ ಆರ್ಥಿಕ ಮುಗ್ಗಟ್ಟಿನಲ್ಲಿದ್ದಾಗ ಸರ್ಕಾರದವರು ಯಾವ ಪ್ರಕಾರವಾಗಿ ಆ ಪತ್ರಿಕೆಗೆ ಸಹಾಯ ಮಾಡಿತ್ತೊ ಅದೇ ಪ್ರಕಾರವಾಗಿ ಈ ಪತ್ರಿಕೆಗಳಿಗೆ ಸಹಾಯ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?

ಈ) ಸಹಾಯವನ್ನು ಮಾಡಲು ಸಾಧ್ಯವಿಲ್ಲವೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಆರ್ಥಿಕ ಮುಗ್ಗಟ್ಟಿನಿಂದ ಪತ್ರಿಕೆಗಳು ಮುಚ್ಚುವ ಸ್ಥಿತಿಯಲ್ಲಿರುವುದಾಗಿ ಬೆಳಗಾವಿ ನಗರದ ನಾಡೋಜ ಸಮದರ್ಶಿ ಕನ್ನಡ ದಿನಪತ್ರಿಕೆಗಳು ಮತ್ತು ಸಂದೇಶ ದ್ವೈವಾರ ಪತ್ರಿಕೆಗಳಿಂದ ಧನಸಹಾಯ ಕೋರಿ ಸರ್ಕಾರಕ್ಕೆ ಮನವಿಗಳು ಬಂದಿವೆ.

ಆ) ರಾಜ್ಯದ ಗಡಿ ಪ್ರದೇಶದ ಜಿಲ್ಲೆಯಾದ ಕನ್ನಡ ದಿನಪತ್ರಿಕೆಗಳಿಗೆ ಪ್ರೋತ್ಸಾಹ ದಾಯಕವಾಗಿ ಕ್ರಮಬದ್ಧವಾಗಿ ಹೆಚ್ಚು ಜಾಹೀರಾತು ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಜಿಲ್ಲೆಯ ಭೂಸ್ವಾಧೀನ ಮತ್ತು ಸ್ವಾಯತ್ತ ಸಂಸ್ಥೆಗಳ

ಜಾಹೀರಾತುಗಳನ್ನು ಜಿಲ್ಲೆಯ ಕನ್ನಡ ದಿನಪತ್ರಿಕೆಗಳಿಗೆ ನೀಡುವಂತೆಯೂ ಈಗಾಗಲೇ ಸುತ್ತೋಲೆ ಕಳುಹಿಸಲಾಗಿದೆ.

ಇ) ಸಂಯುಕ್ತ ಕರ್ನಾಟಕ ದಿನಪತ್ರಿಕೆಯು ನೋಂದಾಯಿತ ದತ್ತಿ ಸಂಸ್ಥೆಯಿಂದ ನಡೆಸಿಕೊಂಡು ಬಂದಿದ್ದರಿಂದ ಈ ಸಂಸ್ಥೆ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಸಾಲಕೊಟ್ಟು ಈ ಸಾಲದ ಮೊತ್ತವನ್ನು ಈ ಪತ್ರಿಕೆಗೆ ನೀಡುತ್ತಿದ್ದ ಟೆಂಡರ್ ಮತ್ತು ಜಾಹೀರಾತುಗಳ ವೆಚ್ಚದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲಾಯಿತು. ಈ ಪತ್ರಿಕೆಗಳಿಂದ ಈ ಬಗ್ಗೆ ಮನವಿ ಬಂದಲ್ಲಿ ಪರಿಶೀಲಿಸಲಾಗುವುದು.

ಈ) ಉದ್ಭವಿಸುವುದಿಲ್ಲ.

ದಶಲಕ್ಷ ಬಾವಿಗಳ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆಗೆ ಖರ್ಚಾದ ಹಣ

2772-ಶ್ರೀ ಮಂಜುನಾಥ ಸಿ. ಕುನ್ನೂರ್, (ಶಿಗ್ಗಾಂವ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಶಲಕ್ಷ ಯೋಜನೆಯಡಿ 1990-91ರಲ್ಲಿ ಧಾರವಾಡ ಜಿಲ್ಲೆಗೆ ಎಷ್ಟು ಹಣ ಒದಗಿಸಲಾಗಿದೆ?

ಆ) ಸದರಿ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಖರ್ಚು ಮಾಡಲಾದ ಹಣವೆಷ್ಟು?

ಇ) ಧಾರವಾಡ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಹಾಗೂ ಎಷ್ಟೆಷ್ಟು ಖರ್ಚು ಮಾಡಲಾಗಿದೆ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು):

ಅ) ಸದರಿ ಯೋಜನೆಯಡಿಯಲ್ಲಿ 1990-91ರಲ್ಲಿ ಧಾರವಾಡ ಜಿಲ್ಲೆಗೆ ರೂ. 73.679 ಲಕ್ಷ ಒದಗಿಸಲಾಗಿದೆ.

ಆ) ಈ ಯೋಜನೆಯಡಿಯಲ್ಲಿ ಖರ್ಚು ಮಾಡಲಾದ ಹಣ ರೂ. 22.285 ಲಕ್ಷಗಳು.

ಇ) ತಾಲ್ಲೂಕುವಾರು ಖರ್ಚು ಮಾಡಿರುವ ಹಣದ ವಿವರವನ್ನು ತಃಖ್ತೆಯಲ್ಲಿ ಒದಗಿಸಲಾಗಿದೆ.

STATEMENT

	Name of the District	*Amount Rs.*
1.	Dharwad	1,70,000
2.	Hubli	1,66,964
3.	Shiggon	1.34,550
4.	Kalghatagi	34,000
5.	Kundgol	70,132
6.	Hangal	79,546
7.	Savanur	13,991
8.	Shirahatti	1,00,883
9.	Haveri	41,697